ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 05(ಜಕ್ಕೂರು)
ವಾರ್ಡ್‌ಸಮಿತಿ ಸಭೆ, ದಿನಾಂಕ: 16.01.2021 ರ
ಸಭಾ ನಡುವಳಿ

ದಿನಾಂಕ: 16.01.2021 ರಂದು ಬೆಳ್ಳಿಗೆ 11.30 ಗಂಟೆಗೆ ವಾರ್ಡ್ ನಂ.05 ಜಕ್ಕೂರು ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪ ವಿಭಾಗ ಕಛೇರಿ, ದಾಸರಹಳ್ಳಿ, ಇಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಜಿ ದೇವರಾಜ್ | ನೋಡಲ್ ಅಧಿಕಾರಿ, ವಾರ್ಡ್ ನಂ. 05(ಜಕ್ಕೂರು) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನಾ ವಿಭಾಗ) |
| 2 | ವೈ.ಎನ್ ಮಹಂತೇಶ್ ಕುಮಾರ್ | ಕಾರ್ಯದರ್ಶಿಗಳು, ವಾರ್ಡ್ ಕಮಿಟಿ ವಾರ್ಡ್ ನಂ. 06 , ಮತ್ತು ಸಹಾಯಕ ಅಭಿಯಂತರರು |
| 3 | ಡಾ॥ ಮುರಳಿಧರ್ ಬಿ | ವೈದ್ಯಾಧಿಕಾರಿಗಳು, ಪ್ರಥಾಮಿಕ ಆರೋಗ್ಯ ಕೇಂದ್ರ ಅಗ್ರಹಾರ ಬಡಾವಣೆ |
| 4 | ಶ್ರೀ ಶ್ರೀನಾಥ್ | ಚಿಕ್ಕಜಾಲ ಪೋಲಿಸ್ ಠಾಣೆ |
| 5 | ಶ್ರೀ ಶ್ರೀನಿವಾಸ್ | ಬಿಬಿಎಂಪಿ, ವಿದ್ಯುತ್ ವಿಭಾಗ |
| 6 | ಶ್ರೀ ಜಿ. ವೆಂಕಟೇಶ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 05 |
| 7 | ಶ್ರೀ ಅಶ್ವಥ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 05 |
| 8 | ಬಿ. ನಾಗೇಂದ್ರಪ್ಪ | ಎಸ್.ಡಿ.ಎ, ಕಂದಾಯ ಶಾಖೆ, ಥಣಿಸಂದ್ರ |
| 9 | ಶ್ರೀನಿವಾಸಮೂರ್ತಿ ಎಂ | ಬಿಬಿಎಂಪಿ ವಿದ್ಯುತ್ ವಿಭಾಗ |

ಶ್ರೀ ವೈ.ಎನ್ ಮಹಂತೇಶ್ ಕುಮಾರ್ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ಅಧಿಕಾರಿಗಳು, ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ಈ ಹಿಂದೆ ದಿನಾಂಕ: 02.01.2020 ರಂದು ನಡೆಸಬೇಕಾಗಿದ್ದ ವಾರ್ಡ್ ಕಮಿಟಿ ಸಭೆಯನ್ನು ಕಛೇರಿಯ ಸ.ಕಾ.ಅ ಹಾಗೂ ಸ.ಅ-06 ರವರಿಗೆ ಕರೋನಾ ಸೊಂಕು ಕಾಣಿಸಿಕೊಂಡಿದ್ದರಿಂದ



Scanned by CamScanner

ಆರೋಗ್ಯ ಹಿತದೃಷ್ಟಿಯಿಂದ ಕಮಿಟಿ ಸಭೆಯನ್ನು ಮುಂದುಡಲಾಗಿತ್ತು ಎಂದು ಸಭೆಗೆ ತಿಳಿಸುತ್ತಾ, ಈ ಸಭೆಯಲ್ಲಿ ಚರ್ಚಿಸಬೇಕಾದ ಪ್ರಮುಖ ವಿಷಯಗಳ ಬಗ್ಗೆ ವಿವರಿಸುತ್ತಾ ಸದರಿ ಸಭೆಯ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್-19ರ ಸಂಬಂಧ ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಜಾಗೃತ ಕ್ರಮಗಳ ಬಗ್ಗೆ.:** ವಾರ್ಡ್ ನಂ. 05ರ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಅಶ್ವಥ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕರೊನಾ ಲಸಿಕೆ ನೀಡುವ ಅಭಿಯಾನ ಪ್ರಾರಂಭವಾಗುತ್ತಿದ್ದು, ಮೊದಲಿಗೆ ಕರೊನಾ ವಾರಿಯರ್ಸ್‌ಗಳಾದ ಅರೋಗ್ಯ ಸಿಂಬ್ಬಂದಿಯವರಿಗೆ ನೀಡಿ ನಂತರ ಪಾಲಿಕೆಯ ಎಲ್ಲಾ ಅಧಿಕಾರಿ ಸಿಬ್ಬಂಧಿಗೆ ನೀಡಲು ಉದ್ದೇಶಿಸಿದ್ದು, ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಮಾಹಿತಿಯನ್ನು ಸಂಗ್ರಹಿಸಲು ಸಭೆಗೆ ತಿಳಿಸಲಾಯಿತು.
2. ರಾಜೇಂದ್ರ ಹೆಗಡೆ, ಟೆಲಿಕಾಂ ಬಡಾವಣೆ ರವರು ಮಾತನಾಡಿ ಟೆಲಿಕಾಂ ಬಡಾವಣೆಯ ಉದ್ಯಾನವನ ನಿರ್ವಹಣೆಯ ಬಗ್ಗೆ ಮಾತನಾಡಿ ಉದ್ಯಾನವನದ ನಿರ್ವಹಣೆಯಾಗದೇ ಇರುವುದರಿಂದ ಇಲ್ಲಿನ ಸ್ಥಳೀಯ ಕೆಲವು ಯುವಕರು ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದು ಇದರಿಂದ ಸಾರ್ವಜನಕರಿಗೆ ಕಿರಿಕಿರಿಯುಂಟಾಗುತ್ತಿರುವುದಾಗಿ ಸಭೆಗೆ ತಿಳಿಸಿದರು ಈ ಬಗ್ಗೆ ಮಾನ್ಯ ಅಧ್ಯಕ್ಷರು ಮಾತನಾಡಿ ಈ ಬಗ್ಗೆ ತೋಟಗಾರಿ ಇಲಾಖೆಗೆ ವಿಷಯ ತಿಳಿಹಿಸುವಂತೆ ಸೂಚಿಸಿ ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಪೋಲಿಸ್ ಠಾಣೆಯ ಅಧಿಕಾರಿಯವರಿಗೆ ಈ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿದರು.
3. ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರ ನೀಡುವಂತೆ ಸೂಚಿಸಿದರು. ಅದಕ್ಕೆ ಬೀದಿ ದೀಪಗಳ ಬಗ್ಗೆ ಸಹಾಯಕ ಅಭಿಯಂತರರಾದ ಶ್ರೀ ಬಾಬುರೆಡ್ಡಿ ರವರು ಮಾತನಾಡಿ ಎಂ.ಸಿ.ಇ.ಸಿ.ಹೆಚ್.ಎಸ್ ಬಡಾವಣೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಲಾಗಿರುತ್ತದೆ. ಉಳಿಕೆ 2 ಬೀದಿ ದೀಪಗಳು ಬಾಕಿ ಇದ್ದು, ಕೂಡಲೇ ಅಳವಡಿಸಲು ಕ್ರಮ ವಹಿಸಲಾಗಿರುತ್ತದೆ ಸಭೆಗೆ ತಿಳಿಸಿದರು. ಹಾಗೂ ವಾರ್ಡ್ ವ್ಯಾಪ್ತಿಯ ನಿರಂತರ ಬಡಾವಣೆಯಲ್ಲಿ ಬೀದಿ ದೀಪದ ನಿರ್ವಹಣೆಯ ಬಗ್ಗೆ ಶ್ರೀನಾಥ್ ಎಂಬುವವರು ದೂರು ನೀಡಿದ್ದು ಈ ಬಗ್ಗೆ ಕೂಡಲೇ ಕ್ರಮ ವಹಿಸುವಂತೆ ಸೂಚಿಸಿದರು.
4. ವಾರ್ಡ್ ವ್ಯಾಪ್ತಿಯಲ್ಲಿ Silt and Tractor ಮತ್ತು ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡುವ ಕಾಮಗಾರಿಯ ಅವಧಿಯು ಮುಕ್ತಾಯಗೊಂಡಿರುವುದರಿಂದ ಸಾರ್ವಜನಿಕರಿಂದ ಹಲವಾರು ದೂರುಗಳು ಬರುತ್ತಿರುತ್ತವೆ. ಆದುದರಿಂದ Silt and Tractor ಮತ್ತು ಟ್ಯಾಂಕರ್ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡಲು ಅನುದಾನವನು ಬಿಡುಗಡೆಗೊಳಿಸುವಂತೆ ಕ್ರಮ ವಹಿಸಲು ಕೋರಿದರು.
5. ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಅಶ್ವಥ್ ರವರು ಮಾತನಾಡಿ ವಾರ್ಡ್ ನಂ. 05ರ ವ್ಯಾಪ್ತಿಯ ಪ್ರಮುಖ ರಸ್ತೆಗಳಾದ ಕೋಗಿಲು – ಬೆಳ್ಳಹಳ್ಳಿ ಕ್ರಾಸ್, ಹೆಗಡೆನಗರ –ಬೆಳ್ಳಹಳ್ಳಿ ಕ್ರಾಸ್, ಬಾಗಲೂರು ಮುಖ್ಯರಸ್ತೆಗಳಲ್ಲಿ ಸಾರ್ವಜನಿಕರು ಅನಧಿಕೃತವಾಗಿ ಎಲ್ಲೆಂದರಲ್ಲಿ ವಾಹನಗಳ ಪಾರ್ಕಿಂಗ್ ಮಾಡಿ ಪಾದಚಾರಿಗಳಿಗೆ ಕಿರಿಕಿರಿ ಉಂಟಾಗುತ್ತಿರುತ್ತದೆ ಹಾಗೂ ಎಲ್ಲೆಂದರಲ್ಲಿ ಕಸ ಸುರಿಯುತ್ತಿರುತ್ತಾರೆಂದು ತಿಳಿಸಿದರು ಈ ಬಗ್ಗೆ ಸಂಚಾರಿ ಪೋಲಿಸ್ ಠಾಣೆಗೆ ವಿಷಯ ತಿಳಿಸಿ ಕ್ರಮ ವಹಿಸುವಂಥೆ ಸೂಚಿಸಿದರು.
6. ವಾರ್ಡ್ ವ್ಯಾಪ್ತಿಯ ಎಂ.ಸಿ.ಇ.ಸಿ.ಹೆಚ್.ಎಸ್ ಬಡಾವಣೆಯಲ್ಲಿ ಕಾಂಪೌಂಡ್ ಗೋಢೆಯನ್ನು ತೆರವುಗೊಳಿಸುವಂಥೆ ಸಾರ್ವಜನಿಕರು ದೂರು ಸಲ್ಲಿಸಿರುವುದರಿಂದ ಈ ಬಗ್ಗೆ ಕ್ರಮ ವಹಿಸುವಂಥೆ ವಾರ್ಡ್ ಅಭಿಯಂತರರಿಗೆ ಸೂಚಿಸಿದರು.
7. ಮಾನ್ಯ ಅಧ್ಯಕ್ಷರಾದ ಶ್ರೀ ದೇವರಾಜ್ ರವರು ಮಾತನಾಡಿ ಏರ್ ಷೋ –2021ರ ಪ್ರಯುಕ್ತ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಬದಿ ಡೆಬ್ರಿಸ್ ಅನ್ನು ತೆಗೆದು ಸ್ವಚ್ಛಗೊಳಿಸಲು ಹಾಗೂ ಮಂಸಹಾರಿ ಅಂಗಡಿಗಳನ್ನು ತೆರೆಯದಂತೆ ಕ್ರಮ ವಹಿಸಲು ಸ್ಥಳೀಯ ಪೋಲಿಸ್ ಠಾಣೆಯ ಸಹಕಾರ ಪಡೆದು ಕ್ರಮ ವಹಿಸುವಂಥೆ ವಾರ್ಡ್ ಅಭಿಯಂತರರು ಹಾಗೂ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡಿದರು.



Scanned by CamScanner

8. ಮುಂದಿನ ಸಭೆಗೆ ಸಂಬಂಧಪಟ್ಟ ಎಲ್ಲಾ ಪೋಲಿಸ್ ಠಾಣೆಯ ಅಧಿಕಾರಿಗಳು, ಅರಣ್ಯ ಇಲಾಖೆ, ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೆರೆಗಳ ವಿಭಾಗ, ರಾಜಕಾಲುವೆ ಇಲಾಖೆ ಇತ್ಯಾದಿ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿರುವಂಥೆ ಕ್ರಮ ವಹಿಸಲು ಸೂಚಿಸಿದರು

9. ವಾರ್ಡ್ ನಂ. 05ರ ವ್ಯಾಪ್ತಿಯಲ್ಲಿ ಬರುವ ಎಂ.ಸಿ.ಇ.ಸಿ.ಹೆಚ್.ಎಸ್ ಬಡಾವಣೆಯಲ್ಲಿ ಸೈಟ್ ನಂ. 91 ರವರು ಪಾದಚಾರಿ ಮಾರ್ಗಕ್ಕೆ ರ್‍ಯಾಂಪ್ ಕಟ್ಟಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯುಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಾರ್ವಜನಿಕರು ಕೋರಿದರು. ಹಾಗೂ ಸೈಟ್ ನಂ. 16ರಲ್ಲಿ ಚರಂಡಿ ಮತ್ತು ಪಾದಚಾರಿ ಮಾರ್ಗವನ್ನು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಸಾರ್ವಜನಿಕರು ಕೋರಿದರು ಹಾಗೂ ಸೈಟ್ ನಂ. 54ಕ್ಕೆ ಸಂಬಂಧಿಸಿದಂಥೆ ಸದರಿಯವರು ಹಂಚಿಕೆಯಾದ ನಿವೇಶನಕ್ಕಿಂತ ಹೆಚ್ಚಿಗೆ ಸ್ಥಳವನ್ನು ಕಾಂಪೌಂಡ್‌ಗೆ ಬಳಸಿಕೊಂಡಿರುವುದು ಕಂಡು ಬಂದಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಹಾಗೂ ಸೈಟ್ ನಂ. 33 ರವರು ನಕ್ಷೆ ಮಂಜೂರಾತಿಯಂತೆ ಸೆಟ್‌ಬ್ಯಾಕ್‌ಅನ್ನು ಬಿಡದೇ ಮನೆ ನಿರ್ಮಾಣ ಮಾಡುತ್ತಿದ್ದು, ಇದರ ಬಗ್ಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕೋರಿದರು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸುವಂಥೆ ಸೂಚಿಸಿದರು ಹಾಗೂ ಕೋವಿಡ್-19ರ ಸಂಬಂಧ ಮೇಲಾಧಿಕಾರಿಗಳಿಂದ ಬರುವ ಸೂಚನೆ ಮತ್ತು ಆದೇಶಗಳನ್ನು ನಿಯಮಾಸುಸಾರ ಪಾಲಿಸುವಂಥೆ ಹಾಗೂ ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 05(ಜಕ್ಕೂರು)

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 05, (ಜಕ್ಕೂರು)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.



Scanned by CamScanner